ಗೊತ್ತಾಗಬೇಕಾದರೆ ಒಂದೆರಡು ದಿನವೇ ಆಗಿರಬೇಕು. ಆರು ತಿಂಗಳಾದರೂ ಶಾಂತಿ ಯಾವತ್ತೂ ವಾಂತಿ ಮಾಡಲೇ ಇಲ್ಲ. ತಿಂಗಳು ತಿಂಗಳು ಮುಟ್ಟಾಗುವುದೂ ನಿಲ್ಲಲಿಲ್ಲ. ಶಾಂತಿಗಿನ್ನೂ ಅಲ್ಲಿನ ಭಾಷೆ ಮಾತನಾಡಲು ಬರದಿದ್ದರೂ ಕೂಡ ಅವರು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳೋದು ಅರ್ಧಕ್ಕಿಂತ ಹೆಚ್ಚು ಗೊತ್ತಾಗುತ್ತಿತ್ತು. ಒಂದು ದಿನ ರಾತ್ರಿ ಬೀಜುನ ತಾಯಿ ಬೀಜುಗೆ ದಿಢೀರನೆ ಶಾಂತಿಯನ್ನು ವಾಪಸು ಅವಳ ಊರಿಗೆ ಬಿಟ್ಟುಬರುವಂತೆ ಹೇಳಿದ್ದು ತಿಳಿದಂತಾಗಿ ಆಕೆಯ ಎದೆಯ ಮೇಲೆ ಕಲ್ಲುಚಪ್ಪಡಿ ಹೇರಿದಂತೆ ಆಯ್ತು. ಅವ್ವನ ನೆನಪಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಆದರೂ ಕೂಡ ಪೂರ್ಣವಾಗಿ ಮಾತು ತಿಳಿಯದ್ದಕ್ಕೆ ಮತ್ತು ಬೀಜು ತನ್ನೊಂದಿಗೆ ಪ್ರೀತಿಯಿಂದಲೇ ಇದ್ದದ್ದಕ್ಕೆ ಒಂದು ಆಸೆಯ ಗೆರೆ ಹಸಿರಾಗಿಯೇ ಉಳಿದಿತ್ತು. ಕಣ್ಣೊರೆಸಿಕೊಂಡು ಗಂಡನ ತೆಕ್ಕೆಯಲ್ಲಿ ಅರಾಮು ನಿದ್ದೆ ಮಾಡಿದಳು. ಇದಾದ ಒಂದೆರಡು ದಿನಗಳಲ್ಲಿ ಆಕೆಗೆ ತಿಳಿಯುವಂತೆ ಬೀಜು ಊರಿಗೆ ಹೋಗೋಣ ಎಂದು ನಗುನಗುತ್ತಾ ಪ್ರೀತಿಯಿಂದ ಹೇಳಿದ. ಸಂಶಯದಿಂದ ಮತ್ತು ಆತಂಕದಿಂದ ಯಾಕೆಂದು ಕೇಳಿದ್ದಕ್ಕೆ. ಹೋಗಿ ಅವ್ವ, ಅಪ್ಪನ್ನ ಕಂಡು ಎರಡು ದಿನದಲ್ಲಿ ವಾಪಸು ಬರೋಣ ಎಂದು ಹೇಳುತ್ತಾ ಪ್ರೀತಿಯಿಂದ ಅಪ್ಪಿಕೊಂಡ.

ಕಲ್ಲೊಳ್ಳಿ ಸೇರಿದ ಅಳಿಯ ಮಗಳನ್ನು ಆದರದಿಂದ ಬರಮಾಡಿಕೊಳ್ಳಲು ಸಂಗವ್ವಕ್ಕ ಮಾತ್ರ ಖಾಲಿ ಇದ್ದಳು. ಸಂಗಪ್ಪನ ಹಣದ ತಿಜೂರಿ ಇನ್ನೂ ಖಾಲಿಯಾಗದಿದ್ದಕ್ಕೆ ಬಾರು ಧಾಬಾಕ್ಕೇ ದತ್ತಕವಾಗಿಬಿಟ್ಟಿದ್ದ. ಒಂದು ವಾರದವರೆಗೆ ಶಾಂತಿಯೊಂದಿಗೆ ಉಳಿದ ಬೀಜು ಮತ್ತೆ ಸಂಜೆಯೇ ವಾಪಸು ಬರುವುದಾಗಿ ಹೇಳಿ ಬಸ್ಸು ಹತ್ತಿದ. ಶಾಂತಿಯ ಎದೆ ತಳಮಳಿಸಿತಾದರೂ ಅವನ ಕಣ್ಣಿನಲ್ಲಿ ಅವಳ ಪ್ರೀತಿಯ ಬಿಂಬ ಕಂಡಂತಾಗಿ ಆಶಾಭಾವದೊಂದಿಗೆ ಅವನ್ನು ಪ್ರೀತಿಯಿಂದಲೇ ಬೀಳ್ಕೊಟ್ಟಳು. ಸಂಜೆ ಬೀಜು ಬರಲೇಯಿಲ್ಲ. ರಾತ್ರಿ ಊಟ ಮಾಡದೆ ಗಂಡನಿಗಾಗಿ ಕಾದರೂ ಅವನ ಸುಳಿವಿಲ್ಲ. 'ಹೊತ್ತಾಗೇತಿ ನಾಳೆ ಬರತಾನ ಉಂಡು ಮಲಗೆಂದಳು' ಸಂಗವ್ವಕ್ಕ. ಶಾಂತಿ ಉಪಾಸು ಮಲಗಿದಳು. ಮರುದಿನ ಮಳ್ಳಾ ಮರುದಿನ ಬೀಜುನ ಸುಳಿವೇ ಇಲ್ಲದ್ದು ನೋಡಿ ಶಾಂತಿ ಹಾಸಿಗೆ ಹಿಡಿದಳು. ವಿರಹ ವೇದನೆ ಒಂದು




ಕಡೆಯಾದರೆ, ಹೇಳದೆ ಕೇಳದೆ ಅವನು ಹೋದದ್ದಕ್ಕೂ ಇಲ್ಲಿಗೆ ಬರುವುದಕ್ಕೂ ಮುಂಚೆ ಬೀಜೂನ ಅವ್ವ ಮಾತಾಡಿದ್ದಕ್ಕೂ ತಾಳೆಯಾದಂತೆ ಅನಿಸಿ ಶಾಂತಿ ತೀರಾ ಎದೆಗುಂದಿದಳು. ತಿಂಗಳು ಕಳೆದವು. ಸಂಗವ್ವಕ್ಕ, ತನ್ನ ಭಾವನ ಮಗ ಸುಭದ್ರಪ್ಪನ ಕೈಕಾಲು ಹಿಡಿದು ಸೂರತಿಗೆ ಹೋಗಿ ಬೀಜುನ ಬಗ್ಗೆ ವಿಚಾರಿಸಿಕೊಂಡು ಬರುವಂತೆ ವಿನಂತಿಸಿ ಗೋಗರೆದಳು. ಸೆಂಟ್ರಿಂಗ್ ಕೆಲಸದಲ್ಲಿ ಸುತ್ತ ಹಳ್ಳಿಯಲ್ಲಿ ಪ್ರಸಿದ್ಧನಾಗಿದ್ದ ಸುಭದ್ರಪ್ಪ ಕೆಲಸದಲ್ಲಿ ಬಿಡುವು ಮಾಡಿಕೊಂಡು ನಾಲ್ಕೈದು ದೋಸ್ತರನ್ನೂ ಕರೆದುಕೊಂಡು ಅಲ್ಲಿಗೆ ಪ್ರವಾಸಕ್ಕೆಂದು ಹೋಗಿ ಇದನ್ನೂ ವಿಚಾರಿಸಿದರಾಯಿತೆಂದು ತಾಳೆ ಮಾಡಿಕೊಂಡು ಹೊರಟೇಬಿಟ್ಟ. ದೂರದ ಸೂರತಿನಲ್ಲಿ ಬೀಜುನ ಮನೆ ಅಡ್ರೆಸ್ಸು ಹುಡುಕಿ ಹೋಗಿ ತಾವು ಕಲ್ಲೊಳ್ಳಿಯಿಂದ ಬಂದಿರುವುದಾಗಿ ಅಲ್ಪಸ್ವಲ್ಪವೇ ಗೊತ್ತಿರುವ ಹಿಂದಿಯಲ್ಲಿ ಹೇಳುತ್ತಲೇ ಯಾರೂ ಒಳಬರುವಂತೆ ಕರೆಯದಿದ್ದರೂ ಒಳನಡೆದರು. ಸೋಫಾದ ಮೇಲೆ ಯಾವುದೋ ಹೆಂಗಸಿನ ಮೇಲೆ ಕೈಹೇರಿದ ಬೀಜು ಲಲ್ಲೆ ಹೊಡೆಯುತ್ತಿದ್ದ. ●